ಅಧ್ಯಕ್ಷರೇ, ಯಾರ ಆಸ್ತಿಯನ್ನು ಹರಾಜು ಮಾಡುತ್ತಾರೋ ಅವರೇ ಊರಿನಲ್ಲಿ ಇಲ್ಲ. ಯಾರೂ ಇಲ್ಲದ ಸಮಯದಲ್ಲಿ ಠಾಮ್ ಠಾಮ್ ಹೊಡೆದು ಹರಾಜು ಮಾಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಭಾಧ್ಯಕ್ಷರೇ, ಸಹಕಾರಿ ಮಂತ್ರಿಗಳು ಮೇಲ್ಮನೆಗೆ ಹೋಗಿರುವುದರಿಂದ ಅವರ ಪರವಾಗಿ ಈ ಹೇಳಿಕೆಯನ್ನು ಕೊಡುತ್ತೇನೆ.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ನಬಾರ್ಡ್‌ನಿಂದ ಪಡೆದ ಸಾಲವನ್ನು ವ್ಯವಸಾಯ ಸೇವಾ ಸಹಕಾರ ಸಂಘಗಳ ಮುಖಾಂತರ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದ ರೂಪದಲ್ಲಿ ಸಂಘಗಳ ಸದಸ್ಯರಿಗೆ ವಿತರಣೆ ಮಾಡುತ್ತವೆ. ಆಲ್ಲದೆ. ಜಿಲ್ಲಾ ಬ್ಯಾಂಕುಗಳು ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳ ಒಟ್ಟು ಬೇಡಿಕೆಯ ಶೇಕಡ ೪೦ ರಷ್ಟು ವಸೂಲಾತಿಯನ್ನು ಜೂನ್ ೩೦ಕ್ಕೆ ಸಾಧಿಸಿದ್ದಲ್ಲಿ ಮಾತ್ರ ಹೊಸ ಸಾಲದ ಮಿತಿಗಳನ್ನು ಪಡೆಯಲು ಅರ್ಹತೆಗಳಿಸುತ್ತವೆ. ಈ ಕಾರಣದಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಾವು ವಿತರಣೆ ಮಾಡಿದ ಸಾಲವನ್ನು ಸದಸ್ಯರಿಂದ ವಸೂಲು ಮಾಡುವುದು ಅತ್ಯಗತ್ಯವಾಗಿದೆ. ನಬಾರ್ಡ್ ನೀತಿಯಂತೆ ಸಂಸ್ಥಿದಾರರಲ್ಲದ ಮತ್ತು ಹೊಸ ಸದಸ್ಯರಿಗೆಲ್ಲ ಬೆಳೆಸಾಲ ನೀಡುವ ಕಾರ್ಯಕ್ರಮದಡಿಯಲ್ಲಿ ಸುಸ್ತಿ ಸಾಲ ವಸೂಲಾತಿಯ ಅಗತ್ಯ ಅಂಶಗಳಲ್ಲಿ ಒಂದಾಗಿದೆ

ಸಾಲ ವಸೂಲಾತಿಯನ್ನು ಚಾಲನೆ ಗೊಳಿಸಲು ರಾಜ್ಯ ಸರ್ಕಾರವು ೮೨–೮೩ರಿಂದ ೮೫–೮೬ನೇ ಸಾಲುಗಳಿಗೆ ಸಂಬಂಧಿಸಿದಂತೆ ರೂ. ೬೧೪೮ ೬೦ ಲಕ್ಷಗಳ (೬೧.೪೯ ಕೋಟಿ) ಬಡ್ಡಿ ರಿಯಾಯಿತಿ ಮಂಜೂರು ಮಾಡಿದೆ.

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಲಕ್ಕವಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘವು ಇದರ ಸುಸ್ತಿ ಸಾಲ ವಸೂಲಾತಿ ಸಂಬಂಧದಲ್ಲಿ ಡಿಕ್ರಿಗಳನ್ನು ಪಡೆದು ಫ್ಲಾಟ್, ಸಂಬಂಧಪಟ್ಟ ಮಾರಾಟಾಧಿಕಾರಿಯವರು ದಿನಾಂಕ ೧೪–೯–೧೯೮೭ರಂದು ಸಂಘದ ಸುಸ್ತಿ ಸಾಲಗಾರ ಸದಸ್ಯರ ಸ್ಥಿರ ಆಸ್ತಿಗಳನ್ನು ಬಹಿರಂಗ ಹರಾಜು ಮಾಡಲು ನಿಗದಿಪಡಿಸಿರುತ್ತಾರೆ. ಸದರಿ ಹರಾಜು ಪ್ರಕರಣ ಸಂಬಂಧಿಸಿದ ಹದಿನಾಲ್ಕು ಸುಸ್ತಿದಾರರ ಪೈಕಿ ಅತಿ ಕಡಿಮೆ ಸುಸ್ತಿ ಮೊಬಲಗು ರೂ. ೩,೬೮೦–೦೦ ಬಾಕಿ ಇದೆ. ಈ ೧೪ ಜನ ಸಾಲಗಾರರ ಸಂಮಾರು ೮ ವರ್ಷಗಳ ಮೇಲ್ಪಟ್ಟು ಸುಸ್ತಿದಾರರಿರುತ್ತಾರೆ. ಈ ದೃಷ್ಟಿಯಿಂದ ಸರ್ಕಾರ ದಿನಾಂಕ ೧೧–೩–೧೯೮೭ರಲ್ಲಿ ನೀಡಿದ ಸೂಚನೆಗಳನ್ವಯ ಸುಸ್ತಿ ಸಾಲ ವಸೂಲಾತಿ ಕ್ರಮ ಸಮಂಜಸವಿದೆ. ಆದಾಗ್ಯೂ ಸದರಿ ರೈತರಿಂದ ಕಡ್ಡಾಯ ವಸೂಲಿ ಕ್ರಮವನ್ನು ಸದ್ಯಕ್ಕೆ ನಿಲ್ಲಿಸಿ ಸದರಿ ಸಾಲಗಳನ್ನು ಮರುಪಾವತಿ ಮಾಡಲು ಕಾಲಾವಕಾಶ ನೀಡಲು ಸದಸ್ಯರ ಸಲಹೆಯನ್ನು ಸರಕಾರ ಪರಿಶೀಲಿಸುತ್ತದೆ,

ಅಧ್ಯಕ್ಷರು.—ಈಗ ಮುಂದೆ ಮಾನ್ಯ ನಾರಾಯಣಸ್ವಾಮಿಯವರು ಪಿಳಿನೇ ನೋಟೀಸನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಪರಿಶೀಲನೆ ಮಾಡುತ್ತದೆ ಎಂದರು ನಾನು ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡಿದಾಗ ಈಗಲೇ ಸೂಚನೆ ಕೊಟ್ಟು ಹರಾಜು ಆಗುವುದನ್ನು ನಿಲ್ಲಿಸುತ್ತೇನೆಂದು ಹೇಳಿದರು. ಪರಿಶೀಲನೆ ಎಂದರೆ ಏನು ಸ್ವಾಮಿ ?

ಅಧ್ಯಕ್ಷರು.—ಈ ಬಗ್ಗೆ ವಿವರಣೆ ಬೇಡ. ನಿಮಗೊಬ್ಬರಿಗೆ ಅವಕಾಶ ಕೊಟ್ಟರೆ ಕನ್ವೆನ್‌ಷನ್ ಮುರಿದಂತಾಗುತ್ತದೆ. ಮಂತ್ರಿಗಳ ಹೇಳಿಕೆ ಪ್ರತಿ ತರಿಸಿಕೊಂಡು ನೋಡಿ.

ತಿಮ್ಮಾಂಪಲ್ಲಿ ಮಂಡಲ್ ಪಂಚಾಯ್ತಿಗೆ ಸೇರಿದ ಶ್ರೀರಾಂಪುರದಲ್ಲಿ ಶ್ರೀಮತಿ ಪೆದ್ದಕ್ಕ ಎನ್ನುವವರ ಕೊಲೆ

ಶ್ರೀ ಬಿ. ನಾರಾಯಣಸ್ವಾಮಿ.—ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ತಿಮ್ಮಾಂಪಲ್ಲಿ ಮಂಡಲ್ ಪಂಚಾಯ್ತಿಗೆ ಸೇರಿದ ಶ್ರೀರಾಂಪುರದಲ್ಲಿ ಇತ್ತೀಚೆಗೆ ೩ ತಿಂಗಳ ಹಿಂದೆ ಶ್ರೀಮತಿ ಪೆದ್ದಕ್ಕ ಇವರ ಮರಣದ ಬಗ್ಗೆ ನಾನು ಪೋಲೀಸ್ ಕಮಿಷನರ್‌ರವರಿಗೆ ಮನವಿಯನ್ನು ಸಲ್ಲಿಸಿದ್ದೇ ಈ ಮರಣವು ಸ್ವಾಭಾವಿಕವಾಗಿರುವುದಿಲ್ಲ ಕೊಲೆಯಾಗಿರುವುದು ಎಂಬುದಾಗಿ ತಿಳಿಸಿದ್ದರ ಮೇರೆ, ಸದರಿ ಅಧಿಕಾರಿಗಳು ತಮ್ಮ ಇಲಾಖೆಯವರನ್ನು ತನಿಖೆ ನಡೆಸಲು ಕಳುಹಿಸಿರುವುದು ಸರಿಯಷ್ಟೆ. ಆದರೆ ಆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ತನಿಖೆಯನ್ನು ನಡೆಸದೆ ಆ ಗ್ರಾಮದ ಗಣ್ಯ ವ್ಯಕ್ತಿಗಳಿಂದ

ಹಣವನ್ನು ಪಡೆದು ಈ ವಿಚಾರವನ್ನು ಮುಚ್ಚಿಹಾಕಲು ಮರಣವಾದ ವ್ಯಕ್ತಿಗೆ ಮೂರ್ಛೆ ರೋಗ ವಿತ್ತೆಂದು ತಿಳಿಸಿರುತ್ತಾರೆ. ಆದರೆ ಮರಣವಾದ ವ್ಯಕ್ತಿಗೆ ಮೂರ್ಛೆ ರೋಗ ಇರುವ ಬಗ್ಗೆ ಯಾವುದೇ ಆಧಾರವೂ ಇರುವುದಿಲ್ಲ. ಆಲ್ಲದೆ ಶವವನ್ನು ಶವಪರೀಕ್ಷೆಗೆ ಒಳಪಡಿಸದೆ (ಸದರಿ ಗ್ರಾಮದಲ್ಲಿ ಯಾವಾಗಲೂ ಶವವನ್ನು ಹೂಳುವ ಪದ್ಧತಿ ಇರುತ್ತದೆ) ಶವವನ್ನು ಸುಟ್ಟ ಹಾಕಲು ಹೇಳಿರುತ್ತಾರೆ. ಆದುದರಿಂದ ಈ ಬಗ್ಗೆ ಸರಿಯಾದ ತನಿಖೆ ನಡೆದಿರುವುದಿಲ್ಲ ಇದು ಕೊಲೆಯನ್ನು ಮುಚ್ಚಿಹಾಕಲು ಹೂಡಿರುವ ಕೃತ್ಯವಾಗಿರುತ್ತೆ. ಆದುದರಿಂದ ಮಾನ್ಯ ಗೃಹ ಸಚಿವರು ಇದನ್ನು ಸಿಓಡಿ ತನಿಖೆಗೆ ಒಪ್ಪಿಸಬೇಕೆಂದು ನಾನು ಅವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹಸಚಿವರು).— ಮಾನ್ಯ ಅಧ್ಯಕ್ಷರೆ, ಮೃತ ಶ್ರೀಮತಿ ಪೆದ್ದಕ್ಕ ಕೋಂ ಕೃಷ್ಣಯ್ಯ ಇವರು ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಗೋಪಾಲಪುರದ ನಿವಾಸಿಗಳಾಗಿದ್ದರು. ಈಗ ಸುಮಾರು ಒಂದೂವರೆ ವರ್ಷಗಳ ಹಿಂದೆ ಕೃಷ್ಣಯ್ಯನೊಂದಿಗೆ ಮದುವೆ ಆಗಿತ್ತು. ಈಕೆಗೆ ಮೂರ್ಛೆ ರೋಗ ಬರುತ್ತಿದ್ದು. ಮದುವೆ ಆಗುವುದಕ್ಕಿಂತ ಮೊದಲು ಸಹ ತವರೂರಿನಲ್ಲಿ ಔಷಧೋಪಚಾರ ಮಾಡಿಸಿಕೊಳ್ಳುತ್ತಿದ್ದರು. ಮದುವೆಯಾದ ನಂತರವೂ ಸಹ ಔಷಧೋಪಚಾರ ಮುಂದುವರಿಸಿಕೊಂಡು ಬಂದಿದ್ದು, ಆಕೆಯ ಮರಣದ ಸಮಯದಲ್ಲಿ ೨ ತಿಂಗಳು ಗರ್ಭಿಣಿಯಾಗಿದ್ದು ಮೂರ್ಛೆ ರೋಗ ಹೆಚ್ಚಾಗಿ ಮರಣ ಹೊಂದಿದರು. ಅವರಲ್ಲಿ ಗರ್ಭಿಣಿ ಸ್ತ್ರೀಯರು ಸತ್ತರೆ ಶವವನ್ನು ಹೂಳದೇ ಸುಡುವ ಪದ್ಧತಿ ಇದ್ದುದರಿಂದ ಶವವನ್ನು ಸುಟ್ಟು ಹಾಕಿದುದಾಗಿಯೂ ಶವ ಸಂಸ್ಕಾರದ ಸಮಯಕ್ಕೆ ಮೃತಳ ತಂದೆ ಮತ್ತು ಅಕ್ಕ ಹಾಜರಿದ್ದರೆಂದು ತಿಳಿದು ಬಂದಿದೆ.

ಮೃತರ ಗಂಡ ಕೃಷ್ಣಯ್ಯ ಎಂಬುವರು ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ. ಸದರಿ ವಿಷಯದ ಬಗ್ಗೆ ಮೃತಳ ಯಾವುದೇ ಸಂಬಂಧಿಕರಿಂದ ಬಾಗೇಪಲ್ಲಿ ಪೋಲೀಸ್ ಠಾಣೆಗೆ ದೂರುಗಳು ಬಂದಿರುವುದಿಲ್ಲ ಚಿಕ್ಕಬಳ್ಳಾಪುರ ಡಿ.ವೈ.ಎಸ್.ಪಿ. ಅವರು ತಮ್ಮ ವಿಚಾರಣೆಯ ಅಂಶಗಳನ್ನು ಮಾನ್ಯ ಶಾಸಕರಿಗೆ ದಿನಾಂಕ ೫-೮-೧೯೮೭ರಂದು ತಿಳಿಸಿರುತ್ತಾರೆಂದು ವರದಿಯಾಗಿದೆ.

ಸ್ಥಳೀಯ ಪೋಲೀಸರ ಮೇಲೆ ಮಾಡಲಾದ ಆಪಾದನೆಗಳ ಬಗ್ಗೆ ಯಾವುದೇ ಆಧಾರಗಳು ಇಲ್ಲ. ಆಕೆಯ ತಂದೆ ತಾಯಿಗಳು ಅಣ್ಣ ತಮ್ಮಂದಿರು, ಅಕ್ಕತಂಗಿಯವರು ಸಂಬಂಧಿಕರು ಯಾರೂ ಆಕೆಯ ಕೊಲೆಯಾಗಿದೆಯೆಂದು ದೂರು ಕೊಟ್ಟಿಲ್ಲ. ಶಾಸಕರನ್ನು ಬಿಟ್ಟು ಯಾರೂ ದೂರು ಕೊಟ್ಟಿಲ್ಲ. ಶಾಸಕರು ಪತ್ರ ಬರೆದ ಮೇಲೆ ಆ ಬಗ್ಗೆ ಡಿವೈ ಎಸ್ ಪಿ.ಯವರು ವಿಚಾರಣೆ ಮಾಡಿ ಉತ್ತರ ಕೊಟ್ಟಿದ್ದಾರೆ. ಲಂಚ ತೆಗೆದುಕೊಂಡು ಕೇಸ್ ಮುಚ್ಚಿಹಾಕಿದ್ದಾರೆನ್ನುವುದರಲ್ಲಿ ಯಾವುದೇ ವಿಧವಾದ ನಿಜಾಂಶವಿರುವುದಿಲ್ಲ.

ಅಧ್ಯಕ್ಷರು.— ಶ್ರೀ ಹೆಚ್ ಬಿ. ದ್ಯಾವೀರಪ್ಪ, ಸದಸ್ಯರು ಗೈರು ಹಾಜರಾಗಿದ್ದಾರೆ. ಶ್ರೀಮತಿ ದುನೋರಮಾ ಮಧ್ವರಾಜ್.—

೭) ಕೈಮಗ್ಗದ ಬಟ್ಟೆಗಳಿಗೆ ರಿಬೇಟ್ ನೀಡುವ ಅವಧಿಯನ್ನು ಗೊತ್ತು ಮಾಡುವ ಸುತ್ತೋಲೆಯನ್ನು ಮುಂಚಿತವಾಗಿ ಹೊರಡಿಸುವುದು

ಶ್ರೀಮತಿ ದುನೋರಮಾ ಮಧ್ವರಾಜ್.— ಕೈಮಗ್ಗದವರ ಕೈ ಬಲಪಡಿಸುವ ದೃಷ್ಟಿಯಿಂದ ನೇಕಾರರಿಗೆ ನೆರವು ನೀಡುವ ಸಲುವಾಗಿ ಸರಕಾರ ಪ್ರತಿವರ್ಷ ಹಬ್ಬಗಳ ಸಂದರ್ಭದಲ್ಲಿ ವ್ಯಾಪಾರದ ಮೇಲೆ ಶೇಕಡ ೨೦ ರಿಬೇಟು ನೀಡುತ್ತಿದ್ದುದುಂಟು. ಈ ಸಲುವಾಗಿ ಅವಧಿ ನಿಶ್ಚಯಿಸಿದ ಆಜ್ಞೆ ಮುಂಚಿತವಾಗಿಯೇ ನೇಕಾರರ ಸಹಕಾರಿ ಸಂಘಗಳಿಗೆ ತಲುಪುತ್ತಿತ್ತು. ಈ ಅವಧಿಯಲ್ಲಿ ಸರಕು ವಾರಾಟವಾಗುತ್ತಿತ್ತು.

೧೯೮೭-೮೮ನೇ ವರ್ಷದಲ್ಲಿ ೩೦ ದಿನ ರಿಬೇಟು ಕೊಡಬೇಕೆಂದು ಕೇಂದ್ರ ಸರ್ಕಾರ ಸೂಚಿಸಿದ್ದರೂ ರಾಜ್ಯ ಸರ್ಕಾರ ಸೂಕ್ತ ಆದೇಶ ಹೊರಡಿಸಿಲ್ಲ. ಗಾರ್ಮೆಂಟ್ಸ್ ಹಬ್ಬದ ಪ್ರಯುಕ್ತ ಶೇಕಡ ೨೦ ರಿಬೇಟು ತಾರೀಖು ೨೨-೮-೮೭ರಿಂದ ೭ ದಿವಸದ ಮಟ್ಟಿಗೆ ಕೊಡಬೇಕೆಂಬ ಕೈಗಾರಿಕಾ ಇಲಾಖೆಯ ಟೆಲಿಗ್ರಾಂ ದಕ್ಷಿಣ ಕನ್ನಡದ ನೇಕಾರರ ಸಹಕಾರಿ ಸಂಘಗಳಿಗೆ ತಾರೀಖು೨೪-೮-೧೯೮೭ಮಧ್ಯಾಹ್ನ ತಲುಪಿದೆ. ರಿಬೇಟು ವಿಚಾರ ಸೂಕ್ತ ಪ್ರಕಟಣೆ ನೀಡಲು ಅವಕಾಶವಿಲ್ಲದೆ, ಸಂಘಗಳಿಗೂ, ನೇಕಾರರಿಗೂ ಗ್ರಾಹಕರಿಗೂ ತೀರ ಅನ್ಯಾಯವಾಗಿದೆ. ಬೆಂಗಳೂರಿನಲ್ಲಿರುವ ಸಂಘಗಳು ಮಾತ್ರ ಈ ಸವಲತ್ತು ಪಡೆಯಲು ಸಾಧ್ಯವಾಗಿದೆ.